# ನಿನ್ನೊಡನೆ

## ತುಪ್ಪ ಅಂಟಿದ ಕನ್ನಡಿಯಲ್ಲಿ ಮನುಷ್ಯ ಕಾಣುವನೆ?

> ಹಿಂದೆಲ್ಲ, ಲಜ್ಜೆಗೆಟ್ಟ ಕೆಲಸ ಮಾಡಿದವರ ತಲೆ ಬೋಳಿಸಿ, ಅವರನ್ನು ಕತ್ತೆಯ ಮೇಲೆ ಕೂರಿಸಿ ಊರಬೀದಿಗಳಲ್ಲಿ ಮೆರವಣಿಗೆ ಮಾಡಿ ಅವಮಾನಿಸುತ್ತಿದ್ದರು. ಈಗ, ಹೊಲಸು ತಿಂದ ಕತ್ತೆಗಳನ್ನೇ ಸಾರೋಟಿನಲ್ಲಿ ಕೂರಿಸಿ ಸನ್ಮಾನಿಸಿ, ವಿಜಯೋತ್ಸವ ಆಚರಿಸಲಾಗುತ್ತಿದೆ.

ಮೈಸೂರು ಜಿಲ್ಲೆಯ ಸರಗೂರಿನಲ್ಲಿ ನತದೃಷ್ಟ ಹೆಣ್ಣುಮಗಳ ಆತ್ಮಹತ್ಯೆ ಹಾಗೂ ಲಂಚ ಪ್ರಕರಣದ ಆರೋಪಕ್ಕೆ ಸಿಲುಕಿರುವ ಶಾಸಕರೊಬ್ಬರಿಗೆ ನಿರೀಕ್ಷಣಾ ಜಾಮೀನು ದೊರೆತದ್ದಕ್ಕೆ ಆಚರಿಸಲಾದ ವಿಜಯೋತ್ಸವ – ಈ ಎರಡು ಘಟನೆಗಳನ್ನು ‘ಸ್ವಾತಂತ್ರ್ಯದ ಅಮೃತೋತ್ಸವ’ ಸಂದರ್ಭದಲ್ಲಿ ಒಟ್ಟಿಗಿಟ್ಟು ನೋಡಬೇಕಾಗಿದೆ. ಮೊದಲನೆಯ ಘಟನೆ, ಈ ದೇಶದ ಅಸಹಾಯಕರನ್ನು ಪ್ರತಿನಿಧಿಸುತ್ತಿದೆ. ಮತ್ತೊಂದು ವಿದ್ಯಮಾನ, ಅಧಿಕಾರ, ಜಾತಿ ಹಾಗೂ ಹಣಮದದಿಂದ ಕಾನೂನಿಗೆ ಸವಾಲಾಗಿ ಪರಿಣಮಿಸಿರುವವರನ್ನು ಪ್ರತಿನಿಧಿಸುತ್ತಿದೆ.

ಅತಿವೃಷ್ಟಿಯಿಂದ ಮನೆ ಕಳೆದುಕೊಂಡು ಅತಂತ್ರಳಾಗಿದ್ದ ಚಿಕ್ಕತಾಯಮ್ಮ ಎನ್ನುವ ಮಹಿಳೆ, ಸಾಕಷ್ಟು ದಿನ ಕಾದರೂ ಪರಿಹಾರ ಬಾರದೆ ಹೋದುದರಿಂದ ನಿರಾಶೆಗೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಕುಸಿದಿದ್ದ ಮನೆಗೆ ತೆಂಗಿನಗರಿ ಕಟ್ಟಿಕೊಂಡು ವಾಸಿಸುತ್ತಿದ್ದ ಆಕೆ, ಮುರಿದುಬಿದ್ದ ಮನೆಯಲ್ಲಿಯೇ ನೇಣು ಹಾಕಿಕೊಂಡು ಬದುಕನ್ನು ಕೊನೆಗೊಳಿಸಿಕೊಂಡಿದ್ದಾಳೆ. ಚಿಕ್ಕತಾಯಮ್ಮನ ಸಾವಿಗೆ ಸಾಮಾಜಿಕ ಮಾಧ್ಯಮಗಳಲ್ಲಿ ದುಃಖ ಹಾಗೂ ಆಕ್ರೋಶ ವ್ಯಕ್ತಗೊಂಡಿದೆ. ಚಿಕ್ಕತಾಯಮ್ಮನಂಥ ನತದೃಷ್ಟರು ಈ ದೇಶದ ಒಂದಲ್ಲಾ ಒಂದು ಭಾಗದಲ್ಲಿ ಪ್ರತಿ ದಿನವೂ ಜೀವ ಕಳೆದುಕೊಳ್ಳುತ್ತಿದ್ದಾರೆ. ಸಾಲಬಾಧೆಯಿಂದ ಜೀವ ಕಳೆದುಕೊಳ್ಳುವ ರೈತರ ಉದಾಹರಣೆಗಳು ನಮ್ಮ ನಡುವೆಯೇ ಸಾಕಷ್ಟಿವೆ. ವ್ಯಾಪಾರ ಕೈಹಿಡಿಯದೆ ಮಕ್ಕಳೊಂದಿಗೆ ಪಾಲಕರು ಆತ್ಮಹತ್ಯೆ ಮಾಡಿಕೊಳ್ಳುವ ವರದಿಗಳು ಮಾಧ್ಯಮಗಳಲ್ಲಿ ಆಗಾಗ ಪ್ರಕಟಗೊಳ್ಳುತ್ತಲೇ ಇವೆ. ಇಂಥ ಘಟನೆಗಳು, ಮಧ್ಯಮವರ್ಗದ ಬದುಕು ತಂತಿಯ ಮೇಲಿನ ನಡಿಗೆಯಂತಹದ್ದು ಎನ್ನುವುದನ್ನು ಸೂಚಿಸುತ್ತವೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಬಡತನ ಮತ್ತು ಅಪೌಷ್ಟಿಕತೆಯ ಸಮಸ್ಯೆಗಳು ಸವಾಲಾಗಿ ಬೆಳೆಯುತ್ತಿವೆ ಎಂದು ‘ಕರ್ನಾಟಕ ಮಾನವ ಅಭಿವೃದ್ಧಿ ವರದಿ–2022’ ಹೇಳುತ್ತಿದೆ. ವಾಸ್ತವ ಹೀಗಿರುವಾಗ, ಜನಸಾಮಾನ್ಯರ ದುಗುಡದುಮ್ಮಾನಗಳಿಗೆ ಸ್ಪಂದಿಸಬೇಕಾದ ಜನಪ್ರತಿನಿಧಿಗಳು ಮಾಡುತ್ತಿರುವುದಾದರೂ ಏನು?

ಜನಪ್ರತಿನಿಧಿಗಳು ಏನು ಮಾಡುತ್ತಿದ್ದಾರೆ ಎನ್ನುವುದಕ್ಕೆ ಉದಾಹರಣೆಯಾಗಿ ಲಂಚ ಪ್ರಕರಣದ ಆರೋಪ ಎದುರಿಸುತ್ತಿರುವ ಮಾಡಾಳ್ ವಿರೂಪಾಕ್ಷಪ್ಪ ಅವರನ್ನು ಗಮನಿಸಬಹುದು. ಕೋಟ್ಯಂತರ ರೂಪಾಯಿಗಳ ಹಣದ ಕಂತೆಗಳು ಸಿಕ್ಕಿದರೂ, ಅದರ ಬಗ್ಗೆ ಶಾಸಕರಿಗೆ ಕಸಿವಿಸಿ ಆದಂತಿಲ್ಲ. ಶಾಸಕರಿಗೆ ನಿರೀಕ್ಷಣಾ ಜಾಮೀನು ದೊರೆತ ಸಂದರ್ಭದಲ್ಲಿ, ವಿಜಯೋತ್ಸವ ಆಚರಣೆ ನಡೆದಿದ್ದು, ಅಭಿಮಾನಿಗಳು ಪಟಾಕಿ ಸಿಡಿಸಿ ಸಿಹಿ ಹಂಚಿದ್ದಾರೆ. ಯಾವ ಸಾಧನೆಗಾಗಿ ಈ ಸಂಭ್ರಮ? ಸರಗೂರಿನ ಚಿಕ್ಕತಾಯಮ್ಮನ ಸಾವಿಗೆ ಯಾವೊಬ್ಬ ರಾಜಕಾರಣಿಯೂ ಹನಿಗಣ್ಣಾಗುವುದು ಇರಲಿ, ಸಂತಾಪ ಸೂಚಿಸಿರುವುದೂ ವರದಿಯಾಗಿಲ್ಲ. ಆದರೆ, ಲಂಚದ ಆರೋಪಿಗೆ ಜಾಮೀನು ದೊರೆತದ್ದಕ್ಕೆ ಭಾರೀ ವಿಜಯೋತ್ಸವ! ಅಂಥ ವಿಜಯೋತ್ಸವದಲ್ಲಿ ಭಾಗವಹಿಸಲಿಕ್ಕೆ ಶಾಸಕರಿಗೆ ಲಜ್ಜೆಯೆನ್ನಿಸಲಿಲ್ಲವೆ?

ಸಾರ್ವಜನಿಕ ಜೀವನದಲ್ಲಿ ಸಭ್ಯತೆ–ಲಜ್ಜೆ ಕಳೆದುಹೋಗುತ್ತಿರುವುದಕ್ಕೆ ಹಾಗೂ ಜನಪ್ರತಿನಿಧಿಗಳ ಭ್ರಷ್ಟಾಚಾರ ಜನರ ಪಾಲಿಗೆ ಒಪ್ಪಿತ ಸಂಗತಿಯಾಗಿರುವುದಕ್ಕೆ ಆರೋಪಿ ಶಾಸಕರ ವಿಜಯೋತ್ಸವ ಉದಾಹರಣೆಯಂತಿದೆ. ಹಿಂದೆಲ್ಲ, ಲಜ್ಜೆಗೆಟ್ಟ ಕೆಲಸ ಮಾಡಿದವರ ತಲೆ ಬೋಳಿಸಿ, ಅವರನ್ನು ಕತ್ತೆಯ ಮೇಲೆ ಕೂರಿಸಿ ಊರಬೀದಿಗಳಲ್ಲಿ ಮೆರವಣಿಗೆ ಮಾಡಿ ಅವಮಾನಿಸಲಾಗುತ್ತಿತ್ತು. ಈಗ, ಹೊಲಸು ತಿಂದ ಕತ್ತೆಗಳನ್ನೇ ಸಾರೋಟಿನಲ್ಲಿ ಕೂರಿಸಿ ಸನ್ಮಾನಿಸಿ, ವಿಜಯೋತ್ಸವ ಆಚರಿಸುತ್ತಿರುವುದನ್ನು ನೋಡುತ್ತಿದ್ದೇವೆ.

ಜನಪ್ರತಿನಿಧಿಗಳು ಎಷ್ಟರಮಟ್ಟಿಗೆ ಲಜ್ಜೆಗೆಟ್ಟಿದ್ದಾರೆಂದರೆ, ರಾಸಲೀಲೆಯ ಪ್ರಕರಣ ಬಹಿರಂಗವಾದ ನಂತರವೂ ಜನರೆದುರು ಹೋಗಲಿಕ್ಕೆ ಅವರಿಗೆ ಮುಜುಗರವಾಗುತ್ತಿಲ್ಲ. ಎಂದಿನಂತೆ ಎದೆಯುಬ್ಬಿಸಿಕೊಂಡು, ಪಿತೂರಿಗೆ ಬಲಿಯಾದ ಹುತಾತ್ಮರಂತೆ ವರ್ತಿಸುತ್ತಿದ್ದಾರೆ; ಅಂಥ ನಡವಳಿಕೆಯನ್ನು ಜನರೂ ಸಂಭ್ರಮಿಸುತ್ತಿದ್ದಾರೆ. ರಾಸಲೀಲೆ ಪ್ರಕರಣ ಬಹಿರಂಗಗೊಂಡಿರುವುದು ರಾಜಕೀಯ ಷಡ್ಯಂತ್ರ ಇದ್ದರೂ ಇರಬಹುದು. ಆದರೆ, ಅಂಥ ಸಖ್ಯಗಳಲ್ಲಿ ಗುರ್ತಿಸಿಕೊಳ್ಳುವುದು ಅನೈತಿಕ ಹಾಗೂ ಮೌಲಿಕ ರಾಜಕಾರಣಕ್ಕೆ ತಕ್ಕುದಾದ ನಡವಳಿಕೆಯಲ್ಲ ಎನ್ನುವುದನ್ನು ರಾಜಕಾರಣಿಗಳು ಪ್ರಜ್ಞಾಪೂರ್ವಕವಾಗಿ ಮರೆಯುತ್ತಿದ್ದಾರೆ ಹಾಗೂ ಅವರಿಗೆ ನೈತಿಕ ಪಾಠ ಹೇಳಬೇಕಾದ ಹೊಣೆಗಾರಿಕೆಯನ್ನು ಮತದಾರರೂ ಬಿಟ್ಟುಕೊಟ್ಟಿರುವಂತಿದೆ.

ಒಂದು ಕಡೆ ಬಡತನದ ಅನಾವರಣ, ಇನ್ನೊಂದು ಕಡೆ ಹಣ, ಜಾತಿ ಮತ್ತು ಅಧಿಕಾರದ ಅಸಹ್ಯಕರ ಪ್ರದರ್ಶನವನ್ನು ನೋಡುತ್ತಿದ್ದೇವೆ. ಚುನಾವಣೆಯಲ್ಲಿ ಆರಿಸಿಬರುವುದು, ಧಿಮಾಕು ಹಾಗೂ ಕೊಳಕು ಮಾತನಾಡುವುದಕ್ಕೆ ದೊರೆಯುವ ಪರವಾನಗಿ ಎಂದು ಜನಪ್ರತಿನಿಧಿಗಳು ತಿಳಿದಂತಿದ್ದಾರೆ. ಜನಸಾಮಾನ್ಯರು ಹಾಗೂ ಬಡವರು ವ್ಯವಸ್ಥೆಯಿಂದ ಮಾನವೀಯ ಸ್ಪಂದನವನ್ನು ನಿರೀಕ್ಷಿಸುವಂತಿಲ್ಲ. ಅಸಹಾಯಕರಿಗೆ ಕಾನೂನು ನೆರವು ಸಿಗುವುದೂ ಕಷ್ಟ. ರಾಮರಾಜ್ಯಕ್ಕೆ ಇನ್ನೆರಡು ಗೇಣಷ್ಟೇ ಬಾಕಿ ಎಂದು ರಾಜಕಾರಣಿಗಳು ಹೇಳುತ್ತಿದ್ದಾರೆ. ಆದರೆ, ಹಸಿವು–ಬಡತನ–ಅವಮಾನ–ಅತ್ಯಾಚಾರ ಬಾಧೆಗಳ ವರದಿಗಳಿಲ್ಲದ ಒಂದಾದರೂ ದಿನವನ್ನು ನಾವು ನೋಡಲಿಕ್ಕೆ ಸಾಧ್ಯವಿದೆಯೆ? ದೀನ ದಲಿತರ ಸಂಕಷ್ಟಗಳಿಗೆ ವ್ಯವಸ್ಥೆ ಸ್ಪಂದಿಸುವ ಪವಾಡಗಳು ನಮ್ಮಲ್ಲಿ ನಡೆಯುವುದು ಅಪರೂಪ. ‘ತುಪ್ಪೇರಿದ ದರ್ಪಣದೊಳ್ ಪಜ್ಜಳಿಸಲಾರ್ಪುದೆ ಬಿಂಬಂ’ ಎನ್ನುವ ಜನ್ನ ಕವಿಯ ಮಾತು ಅಂದಿಗಿಂತಲೂ ಇಂದಿಗೇ ಹೆಚ್ಚು ಪ್ರಸ್ತುತ.


ಈಶ್ವರ್

■ ರಘುನಾಥ ಚ.ಹ.